AKSHARASURYA
E-ISSN: 2583-620X
Peer-Reviewed, Multi Lingual E-Journal
Volume – 02, Issue – 03, March 2023.

# ಪಾಲನಹಳ್ಳಿ ಕುಮಾರರಾಮನ ಜಾತ್ರೆ

(ಸ್ಥಳೀಕರು ಮತ್ತು ವಲಸಿಗರ ಸಮನ್ವಯದ ಜಾತ್ರೆ )

**ಸತೀಶ್ ಎ. ಎಂ.**
ಸಂಶೋಧನಾ ವಿದ್ಯಾರ್ಥಿ
ಡಿ.ವಿ. ಗುಂಡಪ್ಪ ಕನ್ನಡ ಅಧ್ಯಯನ ಕೇಂದ್ರ
ತುಮಕೂರು ವಿಶ್ವವಿದ್ಯಾಲಯ, ತುಮಕೂರು.

ತುಮಕೂರು ಜಿಲ್ಲೆ ಕೊರಟಗೆರೆ ತಾಲ್ಲೂಕು ಕೋಳಾಲ ಹೋಬಳಿಗೆ ಸೇರಿದ ಕಂದಾಯ ಗ್ರಾಮ ದೊಡ್ಡಪಾಲನಹಳ್ಳಿ. ಈ ಗ್ರಾಮದಲ್ಲಿ ಮುಜರಾಯಿ ಇಲಾಖಾ ವ್ಯಾಪ್ತಿಗೆ ಒಳಪಟ್ಟಿರುವ ಕುಮಾರರಾಮ ದೇವಾಲಯವಿದೆ. ಯುಗಾದಿ ಹಬ್ಬ ಆದ ಹದಿನೈದು ದಿನಕ್ಕೆ ಕುಮಾರರಾಮನ ಜಾತ್ರೆ ಒಂದು ವಾರ ವಿವಿಧ ಆಚರಣೆಗಳ ಮೂಲಕ ವಿಜೃಂಭಣೆಯಿಂದ ನಡೆಯುತ್ತದೆ. ಕುಮಾರರಾಮ ಎಂದರೆ ತ್ರೇತಾಯುಗದ ದಶರಥ ಮತ್ತು ಕೌಸಲ್ಯ ನಂದನ ರಾಮನಲ್ಲ. ವಿಜಯನಗರ ಸಾಮ್ರಾಜ್ಯ ಸ್ಥಾಪನೆಗೂ ಮೊದಲು ಕುಮ್ಮಟದುರ್ಗದಲ್ಲಿ ಆಳುತ್ತಿದ್ದ ಕಂಪಿಲರಾಯ ಮತ್ತು ಹರಿಯಾಲದೇವಿಯ ಮಗ. ಇಲ್ಲಿ ರಾಮದೇವರಾಗಿ ಭಕ್ತಾದಿಗಳಿಂದ ಪೂಜಿಸಲ್ಪಡುತ್ತಿದ್ದಾನೆ. ಕುಮಾರರಾಮ, ಮಾರಮ್ಮ, ಆಂಜನೇಯ, ಹುಲಿರಾಮಪ್ಪ ಈ ನಾಲ್ಕು ದೇವರುಗಳಿಗೆ ಸಂಬಂಧಿಸಿದಂತೆ ಸ್ಥಳೀಕರು ಮತ್ತು ವಲಸಿಗರು ಸಮನ್ವಯತೆಯಿಂದ ನಡೆಸುವ ವಿಶಿಷ್ಟ ಆಚರಣೆಯ ಜಾತ್ರೆಯಿದು.

ಗಂಡುಗಲಿ ಕುಮಾರರಾಮ ವಿಜಯನಗರ ಸಾಮ್ರಾಜ್ಯದ ಪೂರ್ವದಲ್ಲಿದ್ದ ಕುಮ್ಮಟದುರ್ಗದ ದೊರೆ. ಇತಿಹಾಸದಲ್ಲಿ ಇವನ ಉಲ್ಲೇಖವಿದೆ, ಸಾಹಿತ್ಯದಲ್ಲಿ ಕಾವ್ಯ, ಕಾದಂಬರಿಗಳು ಈತನ ಬಗ್ಗೆ ರಚನೆಯಾಗಿದೆ. ಶೌರ್ಯ, ಶೀಲ ಮತ್ತು ಶೌಚಕ್ಕೆ ಹೆಸರಾದ ಈತ ವಿಜಯನಗರ ಸಾಮ್ರಾಜ್ಯ ಸ್ಥಾಪಕರಾದ ಹಕ್ಕ ಮತ್ತು ಬುಕ್ಕರ ಮಾವ. ತುಮಕೂರು ಜಿಲ್ಲೆ ಹುಳಿಯಾರಿನ ಮಾರಗೊಂಡನ ಮೇಲೆ ದಂಡೆತ್ತಿ ಬಂದು ವಿಜಯಸಾಧಿಸಿದ. ತಂದೆ ನೀಡಿದ ಪಂಥವನ್ನು ಸ್ವೀಕರಿಸಿ ಓರಂಗಲ್ಲಿಗೆ ಹೋಗಿ ಬೊಲ್ಲ ಕುದುರೆಯನ್ನು ಗೆದ್ದು ತಂದ. ಚಿಕ್ಕಮ್ಮ ರತ್ನಾಜಿಯ ಮೋಹದ ಬಲೆಗೆ ಬೀಳದ ಪರನಾರಿ ಸಹೋದರ. ದೆಹಲಿ ಸುಲ್ತಾನರ ಮೇಲೆ ನಡೆದ ಮೂರು ಯುದ್ದದಲ್ಲಿ ಎರಡರಲ್ಲಿ ಜಯಗಳಿಸಿ ಮೂರನೇ ಯುದ್ದದಲ್ಲಿ ಅವರ ಕುತಂತ್ರಕ್ಕೆ ಸಿಲುಕಿ ಅಸುನೀಗಿದ. ಹೀಗೆ ವೀರೋಚಿತವಾಗಿ ಬಾಳಿದ ಐತಿಹಾಸಿಕ ವ್ಯಕ್ತಿ ಕುಮಾರರಾಮ ಕುಮ್ಮಟದುರ್ಗದಿಂದ ಸುಮಾರು 300 ಕಿ.ಮೀ ದೂರದಲ್ಲಿರುವ ಈ ಹಳ್ಳಿಯಲ್ಲಿ ಜಾನಪದ ದೈವನಾಗಿ, ಸಾಂಸ್ಕೃತಿಕ ನಾಯಕನಾಗಿ ನೆಲಸಿ ಭಕ್ತರಿಂದ ಪೂಜಿಸಲ್ಪಡುತ್ತಿದ್ದಾನೆ.

ಕಂಪಿಲರಾಯ ಮತ್ತು ಕುಮಾರರಾಮನ ಪತನದ ನಂತರ ಅವನ ಸಹಚರರು ನಾನಾ ಕಡೆಗೆ ತಮ್ಮ ನೆಲೆಯನ್ನು ಕಂಡುಕೊಳ್ಳಲು ಹೊರಟರು ಅದರಲ್ಲಿ ಒಂದು ಗುಂಪು ಈ ಗ್ರಾಮಕ್ಕೆ ಬಂದು ನೆಲೆಸಿದ್ದರ ಬಗ್ಗೆ ಐತಿಹ್ಯವಿದೆ. ಈ ಊರಿನ ಗೌಡ ಮನೆತನದವರು ನಾವು ಕುಮ್ಮಟದುರ್ಗದಿಂದ ಬಂದವರು ದೇವಾಲಯದ ಪಕ್ಕದಲ್ಲಿರುವ ವೀರಗಲ್ಲಿನ ಶಾಸನ ನಮ್ಮ ಪೂರ್ವಜರದು ಎಂದು ಈಗಲೂ ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೆ. ಕುಮಾರರಾಮನ ದೇವಾಲಯದ ಸ್ಥಾಪನೆ ಯಾವಾಗಾಯ್ತು? ಯಾರು ಕಟ್ಟಿಸಿದರು? ಜಾತ್ರೆ ಯಾವಾಗಿನಿಂದ ಆರಂಭವಾಯಿತು? ಜಾತ್ರೆ ಪ್ರಾರಂಭಿಸಿದವರು ಯಾರು? ಈ ಪ್ರಶ್ನೆಗಳಿಗೆ ಸ್ಪಷ್ಟ ಉತ್ತರಗಳೂ, ದಾಖಲೆಗಳೂ ಇಲ್ಲ. ಮತ್ತೊಂದು ವಿಚಾರವನ್ನು ಇಲ್ಲಿ ಗಮನಿಸಬಹುದು. ಕುರಂಕೋಟೆ ಶಾಸನದಲ್ಲಿ[1] ಕುಮ್ಮಟದುರ್ಗದ ಕಂಪಿಲರಾಯನ ಹೆಸರು ಪ್ರಸ್ಥಾಪವಾಗಿದೆ. ಕಂಪಿಲರಾಯ ಯಾವುದೋ ಕಾರಣಕ್ಕೆ ಈ ಭಾಗಕ್ಕೆ ಬಂದಾಗ ಇವರ ಕೈಕೆಳಗಿನ ಅಧಿಕಾರಿ ಹೊನ್ನಯ್ಯ ಎಂಬುವವನು ರಾಜನಿಗೆ ಗೌರವಾರ್ಥ–ವಾಗಿ ಕುರಂಗೆಕೋಟೆಯ ಪೂರ್ವದ ಹೊರತಾಣ ಗ್ರಾಮವನ್ನು ದಾನವಾಗಿ ನೀಡಿರುವನು. ಕೂರಂಗೆಕೋಟೆ ಎಂದರೆ ಈಗಿನ ಕುರಂಕೋಟೆಯೇ ಆಗಿದೆ. ಹೊರತಾಣ ಎಂದರೆ ಈಗಿನ ಹೊಲತಾಳು ಗ್ರಾಮವಾಗಿದೆ. ಈ ಶಾಸನದ ಕಾಲ 1325 ಎಂದು ಗುರುತಿಸಿದ್ದಾರೆ. ಕುಮಾರರಾಮ ದೇವಾಲಯದ ಪಕ್ಕದಲ್ಲಿರುವ ಲಿಪಿಯಿರುವ ವೀರಗಲ್ಲಿನಲ್ಲಿ ಪ್ರಸ್ಥಾಪಿತವಾಗಿರುವ ಜಕೊಂಡನ ಐವರು ಮಕ್ಕಳಲ್ಲಿ ಒಬ್ಬನ ಹೆಸರು ಹೊಂನಂಣ ಎಂದು ಉಲ್ಲೇಖವಾಗಿದೆ. ಈ ಶಾಸನದ ಕಾಲ 1343 ಎಂದು ಗುರುತಿಸಿದ್ದಾರೆ.[2] ಕುರಂಕೋಟೆ ಶಾಸನಕ್ಕೂ ಪಾಲನಹಳ್ಳಿ ಶಾಸನಕ್ಕೂ ಕಾಲದ ಅಂತರ 18 ವರ್ಷಗಳಾದರೆ ದೂರದ ಅಂತರ ಕೇವಲ 20 ಕಿ.ಮೀ. ಅಷ್ಟೆ. ಕುರಂಕೋಟೆ ಶಾಸನದಲ್ಲಿನ ಹೊನ್ನಯ್ಯ, ಪಾಲನಹಳ್ಳಿ ಶಾಸನದ ಹೊಂನಂಣ ಕಾಲ ಮತ್ತು ದೂರದ ಅಂತರವನ್ನು ಗಮನಿಸಿದಾಗ ಒಬ್ಬನೆ ಆಗಿರುವ ಸಾಧ್ಯತೆಯಿದೆ. ಈ ಊರಿನ ಗೌಡ ಮನೆತನದವರು ಹೇಳುವ ಐತಿಹ್ಯದ[3] ಆಧಾರದ ಮೇಲೆ ಕುಮ್ಮಟದುರ್ಗದಿಂದ ವಲಸೆ ಬಂದ ಕುಮಾರರಾಮನ ಸಹಚರರಿಂದಲೇ ದೇವಾಲಯದ ಸ್ಥಾಪನೆಯಾಗಿ ಜಾತ್ರೆ ಆಚರಣೆಗಳು ಆರಂಭವಾಗಿರಬಹುದು ಎಂದು ಸದ್ಯಕ್ಕೆ ಕಲ್ಪಿಸಿಕೊಳ್ಳಬಹುದಾಗಿದೆ. ಕುಮಾರರಾಮನ ಜಾತ್ರೆ ಮೊದಲರ್ಧಭಾಗ ಮಾರಮ್ಮನ ಸಮ್ಮುಖದಲ್ಲಿ ಉಳಿದರ್ಧ ಕುಮಾರರಾಮನ ಸಮ್ಮುಖದಲ್ಲಿ ನಡೆಯುತ್ತದೆ. ಈ ಊರಿನಲ್ಲಿ ಎರಡು ಮಾರಮ್ಮನ ಗುಡಿಯಿದೆ. ಒಂದು ಪೂಜೆಮಾರಮ್ಮ ಇನ್ನೊಂದು ಗ್ರಾಮದೇವತೆ ಮಾರಮ್ಮ. ಕುಮಾರರಾಮನ ಜಾತ್ರೆಯ ಮೊದಲರ್ಧ ಪೂಜೆಮಾರಮ್ಮನ ಸಮ್ಮುಖದಲ್ಲಿ ನಡೆಯುತ್ತದೆ. ಗ್ರಾಮದೇವತೆ ಮಾರಮ್ಮನಿಗೆ ಮೂರು ವರ್ಷಕ್ಕೊಮ್ಮೆ ಕೋಣ ಬಲಿ ಕೊಡುವ ಪೂಜೆ ನಡೆಯುತ್ತದೆ. ಒಂದು ಊರಿನಲ್ಲಿ ಎರಡು ಮಾರಮ್ಮನ ಗುಡಿಗಳು ಇರಲು ಹೇಗೆ ಸಾಧ್ಯ? ಎಂಬ ಪ್ರಶ್ನೆ ಕಾಡತೊಡಗಿತು. ಆಗ ಕುಮಾರರಾಮನ ಕೌಟುಂಬಿಕ ವಿವರಗಳನ್ನು ಗಮನಿಸಿದಾಗ ಕಂಪಿಲರಾಯ ಮತ್ತು ಹ–ರಿಯಾಲಾದೇವಿಗೆ ಮಾರಮ್ಮ, ಕುಮಾರರಾಮ, ಸಿಂಗಮ್ಮ ಎಂಬ ಮಕ್ಕಳಿರುವ ಉಲ್ಲೇಖ ದೊರೆಯಿತು.[4] ಈ ಊರಿನಲ್ಲಿ ಕುಮಾರರಾಮನ ಕುಟುಂಬವರ್ಗವೇ ನೆಲೆಸಿದೆ. ದೇಗುಲದ ಗರ್ಭಗುಡಿಯಲ್ಲಿ ಕುಮಾರರಾಮ ಮತ್ತು ತಾಯಿ ಹರಿಯಾಲಾದೇವಿ ಗರ್ಭಗುಡಿಯ ಮುಂದೆ ಅವನ ಸಹೋದರ ಕಾಟಣ್ಣ ಮತ್ತು ಮಂತ್ರಿ ಬೈಚಣ್ಣ ಕಾಟಣ್ಣ ಮೋಟಣ್ಣನಾಗಿ, ದೇವಾಲಯದ ಬಲಭಾಗ ಬೆಟ್ಟದ ತಪ್ಪಲಲ್ಲಿ ಕಂಪಿಲರಾಯನ ಮತ್ತೋರ್ವ ಪತ್ನಿ ಕಾಟಮ್ಮ ನೆಲೆಸಿದ್ದಾಳೆ ಈಗ ಕಾಟಮ್ಮನ ಗುಡಿ ಪೂರ್ಣ ಶಿಥಿಲವಾಗಿದೆ, ದೇವಾಲಯದ ಸುತ್ತಲೂ ಶಿಲೆಯ ರೂಪದಲ್ಲಿ ಅವನ ಸಹಚರರು (ಈಗ ಶಿಲೆಗಳು ದೇಗುಲದ ಒಳಗೆ ಗೋಡೆಗೆ ಒರಗಿಸಿಟ್ಟಿದ್ದಾರೆ) ನೆಲೆಸಿದ್ದಾರೆ. ಈ ಊರಿನ ಶಾಸನದಲ್ಲಿ ಬುಕ್ಕರಾಯನ ಹೆಸರು ಪ್ರಸ್ಥಾಪಿತವಾಗಿರುವುದರಿಂದ ಬುಕ್ಕರಾಯ ತನ್ನ ತಾಯಿ ಮತ್ತು ಮಾವನ ದೇವಾಲಯ ಸ್ಥಾಪಿಸಿರುವ ಸಾಧ್ಯತೆಯೂ ಇದೆ. ಇದೆಲ್ಲವನ್ನು ನೋಡಿದಾಗ ಪೂಜೆಮಾರಮ್ಮ ಕುಮಾರರಾಮನ ಸಹೋದರಿ ಆಗಿರಬಹುದಲ್ಲವೆ ಎಂಬ ಪ್ರಶ್ನೆ ಕಾಡುತ್ತದೆ. ಆಕೆ ಕುಮಾರರಾಮನ ಸಹೋದರಿಯೇ ಆಗಿದ್ದರೆ ಕುಮಾರರಾಮನ ಜಾತ್ರೆ ಸ್ಥಳೀಕರು ಮತ್ತು ವಲಸಿಗರ ಸಮನ್ವಯತೆಯಿಂದ ಕೂಡಿರುವ ಜಾತ್ರೆ ಮಾತ್ರವಲ್ಲದೆ ಅಕ್ಕ ತಮ್ಮನ ಜಾತ್ರೆಯೂ ಆಗುತ್ತದೆ. ಕಾಲಗರ್ಭದಲ್ಲಿ ಅಡಗಿರುವ ಸಾಕ್ಷ್ಯಗಳು ಗೋಚರಿಸಿದರೆ ಇಲ್ಲಿನ ವಿಚಾರಗಳ ಮೇಲೆ ಹೊಸ ಬೆಳಕು ಬೀರಿ ಮತ್ತಷ್ಟು ವಿಷಯಗಳು ಹೊರಹೊಮ್ಮುವ ಸಾಧ್ಯತೆಯಿದೆ.

ಯುಗಾದಿ ಹಬ್ಬದ ನಂತರ ನಾಲ್ಕುಹಳ್ಳಿಯ (ದೊಡ್ಡಪಾಲನಹಳ್ಳಿ, ಹೊಸಹಳ್ಳಿ, ಸೀಗೆಪಾಳ್ಯ, ಚಿಕ್ಕಪಾಲನಹಳ್ಳಿ) ಗ್ರಾಮದ ಮುಖಂಡರುಗಳು ಸೇರಿ ಜಾತ್ರೆಯ ದಿನಾಂಕವನ್ನು ಸಾರಲು ತೀರ್ಮಾನಿಸುತ್ತಾರೆ. ಮೊದಲಿಗೆ ಗ್ರಾಮದೇವತೆಗೆ ಗುಗ್ಗರಿ[5] ಇಟ್ಟು ಪೂಜೆಸಲ್ಲಿಸಿ, ನಂತರ ಅಲ್ಲಿನ ಪೂಜಾರಿ ಕೈಯಲ್ಲಿ ಹೂವಿನಿಂದ ಅಲಂಕರಿಸಿರುವ ಕಂಬ ಹಿಡಿದು ಅರೆವಾದ್ಯದ ಸಮೇತ ಬಟ್ಟೆಯ ಮೇಲೆ ನಡೆಯುತ್ತಾ ಆಂಜನೇಯನ ಗುಡಿಗೆ ಬಂದು ಆ ಕಂಬವನ್ನು ಗುಡಿಯ

ಹೊಸ್ತಿಲಲ್ಲಿಟ್ಟು ಪೂಜೆ ಮಾಡಿ ಮತ್ತೆ ಗ್ರಾಮದೇವತೆಯ ಗುಡಿಗೆ ಹಿಂತಿರುಗುತ್ತಾರೆ. ಮರುದಿನ ಬೆಳಗ್ಗೆ ತಮಟೆ ಬಾರಿಸುತ್ತಾ ಜಾತ್ರೆ ದಿನವನ್ನು ಸಾರುತ್ತಾರೆ. ಜಾತ್ರೆ ಸಾರಿದ ನಂತರ ಅದರ ಸಂಕೇತವಾಗಿ ಕುಮಾರರಾಮ ದೇವಾಲಯದ ಮುಂದೆಯಿರುವ ರಾಡಬಾಗಿಲ (ಪ್ರವೇಶ ದ್ವಾರ) ಬಳಿ ಮಾರುತಿ ಚಿತ್ರವಿರುವ ಬಾವುಟ ಕಟ್ಟಿರುವ ಕಂಬವನ್ನು ನೆಡುತ್ತಾರೆ. ಕಂಬ ನೆಡುವುದು ಜಾತ್ರೆಯ ಸಿದ್ದತೆಯ ಆರಂಭಕ್ಕೆ ಜನರಿಗೆ ಸೂಚನೆ ನೀಡುವ ಉದ್ದೇಶವಾಗಿದೆ.

ಕುಮಾರರಾಮನ ಜಾತ್ರೆ ಆರಂಭವಾಗುವ ಐದು ದಿನ ಮೊದಲು ಗ್ರಾಮದೇವತೆಯ ಸಮ್ಮುಖದಲ್ಲಿ ಹೊನ್ನಾರ ನಡೆಸುತ್ತಾರೆ. ಹೊನ್ನಾರ ಎಂದರೆ ಮುಂಗಾರಿನ ಮೊದಲ ಉಳುಮೆ.[6] ಇದೊಂದು ಜನಪದೀಯ ಸಂಸ್ಕೃತಿ ಆಚರಣೆ. ರೈತರು ಭೂದೇವಿಯನ್ನು ಪೂಜಿಸಿ ಬೆಳೆಯನ್ನು ಬೆಳೆಯುವ ಮುನ್ನ ಭೂತಾಯಿಯ ಬಳಿ ಕ್ಷಮೆಯಾಚಿಸಿ ಬೆಳೆ ಚೆನ್ನಾಗಿ ಕೊಡುವಂತೆ ಆಕೆಯನ್ನು ಪ್ರಾರ್ಥಿಸುತ್ತಾರೆ. ನೇಗಿಲಿಗೆ ಪೂಜೆಸಲ್ಲಿಸಿ ಅಂದು ಸಾಂಕೇತಿಕವಾಗಿ ಭೂಮಿಯನ್ನು ಉಳುಮೆ ಮಾಡಿ ಭೂತಾಯಿಯನ್ನು ಪ್ರಾರ್ಥಿಸುವ ವಿಶಿಷ್ಟ ಆಚರಣೆ. ಹೊನ್ನು ಎಂದರೆ ಚಿನ್ನ ಆರು ಎಂದರೆ ನೇಗಿಲು ನೇಗಿಲ ಮೂಲಕ ಚಿನ್ನದಂತಹ ಬೆಳೆಯನ್ನು ತೆಗೆಯಲು ಆರಂಭಿಸುವ ದಿನದ ಪ್ರಾರ್ಥನೆಯನ್ನು ಹೊನ್ನಾರು ಎನ್ನುತ್ತಾರೆ.

ಹೊನ್ನಾರು ಆದ ಮಾರನೆಯ ದಿನ ರಾತ್ರಿ ಗ್ರಾಮದೇವತೆಯ ಸಮ್ಮುಖದಲ್ಲಿ ಜಾಗಾರ ನಡೆಸುತ್ತಾರೆ. ಜಾಗಾರ ಎಂಬುದು ಸಹ ಕೃಷಿ ಸಂಬಧಿತವಾದ ಜನಪದೀಯ ಸಂಸ್ಕೃತಿ ಆಚರಣೆ.[7] ಬಿದಿರಿನ ಬುಟ್ಟಿ /ಮಣ್ಣಿನ ಮಡಕೆ ಅಥವಾ ಸಗಣಿಯಿಂದ ಮಾಡಿರುವ ಮಡಕೆ (ಇದೇ ಜಾಗಾರ )ಯಲ್ಲಿ ಅಂದು ವಿವಿಧ ರೀತಿಯ ಬೀಜಗಳನ್ನು ಬಿತ್ತನೆ ಮಾಡಿ ಒಂಭತ್ತು ದಿನಗಳ ಕಾಲ ಅದಕ್ಕೆ ನೀರೆರೆದು ಪೋಷಿಸುತ್ತಾರೆ. ಯಾವ ಬೀಜ ಹೆಚ್ಚು ಚೆನ್ನಾಗಿ ಮೊಳಕೆಯೊಡೆಯುತ್ತದೆಯೋ ಆ ಬೀಜ ಆ ವರ್ಷದಲ್ಲಿ ಚೆನ್ನಾಗಿ ಬೆಳೆಕೊಡುತ್ತದೆ ಎಂದು ರೈತರೆಲ್ಲ ಸೇರಿ ತೀರ್ಮಾನಿಸಿ ನಂಬಿಕೆಯಿಂದ ಆ ಬೆಳೆಯನ್ನು ಬೆಳೆಯಲು ಮೊದಲು ಮಾಡುತ್ತಾರೆ. ಯಾವುದೇ ರೀತಿಯ ಕೀಟಬಾಧೆ, ರೋಗರುಜಿನಗಳು ಆ ಬೆಳೆಗೆ ತಾಕಬಾರದು ಎಂದು ದೈವದಲ್ಲಿ ಮೊರೆಹೊಕ್ಕಿ ಆರಾಧಿಸಿ ನಂತರ ಕೃಷಿಚಟುವಟಿಕೆಯನ್ನು ಆರಂಭಿಸುತ್ತಾರೆ. ಈ ಎರಡು ಆಚರಣೆಗಳನ್ನು ಒಟ್ಟಾಗಿ 'ಹೊನ್ನಾರ ಜಾಗಾರ 'ಎಂದು ಆಚರಿಸುತ್ತಾರೆ. ಈ ಗ್ರಾಮದಲ್ಲಿ ಕುಮಾರರಾಮನ ಜಾತ್ರೆ ಆರಂಭವಾಗುವ ನಾಲ್ಕು ದಿನ ಮೊದಲು ಆಂದರೆ ಗುರುವಾರ ಹೊನ್ನಾರವನ್ನು ಶುಕ್ರವಾರದಂದು ಜಾಗಾರವನ್ನು ಆಚರಿಸುತ್ತಾರೆ. ಹೊನ್ನಾರದಂದು ಪರ ಊರಿನಿಂದ ಬಂದ ರೈತ ಊರಿನ ಮುಖಂಡರನ್ನು ಉಳಲು ಭೂಮಿ ಕೇಳುವುದು, ಊರಿನ ಮುಖಂಡರ ಮತ್ತು ರೈತನ ಮಾತು ಕಥೆಗಳ ಮೂಲಕ ನೇಗಿಲ ಪೂಜೆ ಮಾಡಿ ಹೊನ್ನಾರ ಆಚರಿಸುತ್ತಾರೆ. ಜಾಗಾರಮಾಡುವ ದಿನದಂದು ಒಬ್ಬ ಹುಡುಗನಿಗೆ ಕಚ್ಚೆಪಂಚೆ ಉಡುಸಿ ಪೇಟ ತೊಡಿಸಿ ಮತ್ತಿಬ್ಬರು ಹುಡುಗರಿಗೆ ಸ್ತ್ರೀ ವೇಷ ಹಾಕಿಸಿ ಧಾನ್ಯ ಕೇರುವ ಮೊರಕ್ಕೆ ಬಿಳಿ ಬಟ್ಟೆ ಸುತ್ತಿ ಅದಕ್ಕೆ ಬೇವಿನ ಸೊಪ್ಪು ಮತ್ತು ಹೂವಿನಿಂದ ಅಲಂಕರಿಸಿ ಸ್ತ್ರೀ ವೇಷಧಾರಿಯೊಬ್ಬನ ತಲೆಮೇಲಿರಿಸಿ, ಬಿಳಿಬಟ್ಟೆಯ ಗಂಟಿಗೆ ಬೇವಿನಸೊಪ್ಪು ಸಿಗಿಸಿ ಮತ್ತೊಬ್ಬ ಸ್ತ್ರೀವೇಷಧಾರಿಯ ತಲೆಮೇಲಿರಿಸಿ, ಕಚ್ಚೆಪಂಚೆತೊಟ್ಟ ಹುಡುಗನ ಕೊರಳಿಗೆ ಬೇವಿನ ಸೊಪ್ಪಿನ ಹಾರ ಹಾಕಿ, ಇನ್ನೊಬ್ಬರು ಪೂಜಾರಿಯ ವೇಷ ತೊಟ್ಟು ಮಾರಮ್ಮನ ದೇವಾಲಯದ ಸುತ್ತ ಅರೆ ಮತ್ತು ತಮಟೆ ವಾದ್ಯಗಳ ಸಮೇತ ಪ್ರದಕ್ಷಿಣೆ ಬಂದು ಆನಂತರ ಗ್ರಾಮದೇವತೆಯ ಗುಡಿಯ ಮುಂದೆ ನಿಂತು ನಮ್ಮ ಕೋಣ ಕಳೆದು ಹೋಗಿದೆ ಎಲ್ಲಿದೆ ನೋಡಿದ್ರಾ ಅಂತ ಕೇಳಿ, ತಮಾಷೆಯ ಸವಾಲು ಜವಾಬು ಮಾತುಕತೆ ಮಾಡುವ ಮೂಲಕ ಜಾಗಾರದ ಆಚರಣೆ ಮಾಡುತ್ತಾರೆ. ಕೃಷಿಯ ಆಚರಣೆ ಜಾತ್ರೆಯ ಹಿನ್ನೆಲೆಯಲ್ಲಿ ತಮಾಷೆಯ ರೂಪ ಪಡೆದಿರುವುದು ಸೋಜಿಗ.

ಹೊನ್ನಾರ ಜಾಗಾರದ ನಂತರ ಶನಿವಾರ ಆಂಜನೇಯನಿಗೆ ಆರತಿಯಿರುತ್ತದೆ, ಭಾನುವಾರ ದೇವಾಲಯದ ಎದುರು ಇರುವ ಗರುಡಗಂಬದ ಬಳಿ ನಿಲ್ಲಿಸಿರುವ ರಥದೊಳಗೆ ಕಳಶ ಇಟ್ಟು ಅರೆವಾದ್ಯದ ಸಮೇತ ಪೂಜೆ ಸಲ್ಲಿಸುತ್ತಾರೆ. ಕಳಶ ಸ್ಥಾಪನೆಯ ನಂತರ ಈರಮಾಸ್ತಿ ಹಾಗೂ ಅದೇದಿನ ರಾತ್ರಿ ಮಾರಮ್ಮನಿಗೆ ಆರತಿ ಇರುತ್ತದೆ. ವೀರ ಮತ್ತು ಮಹಾಸತಿ ಈ ಎರಡರ ಮಿಶ್ರರೂಪ ಗ್ರಾಮ್ಯಭಾಷೆಯಲ್ಲಿ ಈರಮಾಸ್ತಿಯಾಗಿದೆ. ಕುಮಾರರಾಮ ದೇವಾಲಯದ ಬಲಭಾಗದಲ್ಲಿ ಲಿಪಿಯಿರುವ ವೀರಗಲ್ಲಿದೆ. ಈ ವೀರಗಲ್ಲಿನಲ್ಲಿ ಜಕೊಂಡ ಮತ್ತು ಆತನ ಐವರು ಮಕ್ಕಳು ಯಾವುದೋ ಯುದ್ದದಲ್ಲಿ ಹೋರಾಡಿ ಮಡಿದ ವಿವರ ದಾಖಲಾಗಿದೆ.[8] ಆದರೆ ಯಾವ ಹೋರಾಟ ಅದಕ್ಕೆ ಕಾರಣಗಳೇನು ಎಂಬುದು ಉಲ್ಲೇಖವಾಗಿಲ್ಲ. ಈ ಊರಿನ ನಾಲ್ಕು ದಿಕ್ಕುಗಳಲ್ಲಿಯೂ ಮಾಸ್ತಿ ಕಲ್ಲುಗಳಿವೆ. ಜಕೊಂಡನ ಮಕ್ಕಳು ಮರಣಹೊಂದಿದ ಮೇಲೆ ಅವರ ಪತ್ನಿಯರು ಪ್ರಾಣಾರ್ಪಣೆಮಾಡಿ ಮಹಾಸತಿಯಾಗಿರಬಹುದು. ಅವರ ವಂಶಜರು ನೆನಪಿಗಾಗಿ ವೀರಗಲ್ಲು ಮಾಸ್ತಿಗಲ್ಲುಗಳನ್ನು ನಡೆಸಿರಬಹುದು. ಅವರ ನೆನಪಿಗಾಗಿ ಪ್ರತಿವರ್ಷ ಈರಮಾಸ್ತಿ ನಡೆಸುವ ಪರಿಪಾಠ ನಡೆದುಕೊಂಡು ಬಂದಿರಬಹುದು. ಈಗಲೂ ಈ ಊರಿನ ಗೌಡಮನೆತನದವರೆ ಈರಮಾಸ್ತಿ ನಡೆಸಿಕೊಡುತ್ತಾರೆ. ಗೌಡರ ಮನೆಯವನು ವೀರನ ವೇಷ ತೊಟ್ಟು ಆಚಾರರ ಮನೆಯ ಹುಡುಗನಿಗೆ ಸ್ತ್ರೀವೇಷ (ಮಾಸ್ತಿ) ತೊಡಿಸಿ ಈರಮಾಸ್ತಿ ನಡೆಸಿಕೊಡುತ್ತಾರೆ. ಕರಿಕಂಬಳಿ ತೊಟ್ಟು ನೆಲ್ಲುಲ್ಲಿನಿಂದ ಮಾಡಿದ ವಿವಿಧ ಆಭರಣಗಳಲ್ಲಿ ಡಾಬನ್ನು ಸೊಂಟಕ್ಕೆ ಬಿಗಿದು, ಕಡಗವನ್ನು ಕೈಗೆ ಪೆಂಟವನ್ನು ಕಾಲಿಗೆ ಧರಿಸಿ, ಪೇಟವನ್ನು ತಲೆಗೆ ಸುತ್ತಿ ತಲೆಗೊಂದು ಸೊಂಟಕ್ಕೊಂದು ಮಾವಿನ ಕೊನೆ ಸಿಗಿಸಿಕೊಂಡು ಧಾನ್ಯ ಕೇರುವ ಮೊರವನ್ನು ಕೈಯಲ್ಲಿ ಹಿಡಿದು ವೀರ ಸಿದ್ದನಾಗುತ್ತಾನೆ. ಹುಡುಗನಿಗೆ ಸ್ತ್ರೀವೇಷ ತೊಡಿಸಿ ತಲೆಗೆ ಹೂ ಮುಡಿಸಿ ಕೆನ್ನೆಗೆ ದೃಷ್ಟಿ ಬೊಟ್ಟಿಟ್ಟು ಕೈಗೊಂದು ಕರವಸ್ತ್ರ ಕನ್ನಡಿ ನೀಡಿ ಮಾಸ್ತಿಯನ್ನು ಸಿದ್ದಪಡಿಸುತ್ತಾರೆ. ಈರ ಮತ್ತು ಮಾಸ್ತಿ ಇಬ್ಬರು ಮಾರಮ್ಮನಿಗೆ ನಮಿಸಿ ಅಲ್ಲಿಂದ ಕುಮಾರ ರಾಮನ ದೇಗುಲದ ಮುಂದೆ ಬಂದು ಆತನಿಗೂ ನಮಸ್ಕರಿಸಿ ದೇವಾಲಯದ ಎದುರಿರುವ ಗರುಡಗಂಬ ಮತ್ತು ಅದರ ಹತ್ತಿರ ನಿಲ್ಲಿಸಿರುವ ರಥದ ಸುತ್ತ ಕುಣಿಯುತ್ತಾ ಪ್ರದಕ್ಷಿಣೆ ಮಾಡುವುದರ ಮೂಲಕ ಈರಮಾಸ್ತಿಯನ್ನು ನಡೆಸಿಕೊಡುತ್ತಾರೆ. ಈರಮಾಸ್ತಿಯ ಆಚರಣೆ ಮೂಲಕ ಕುಮಾರರಾಮನ ತುಂಬು ಜಾತ್ರೆ ಆರಂಭವಾಗುತ್ತದೆ.

ಭಾನುವಾರ ನಡುರಾತ್ರಿ ಊರಲ್ಲಿ ಮತ್ತೊಂದು ಆಚರಣೆ ಜರುಗುತ್ತದೆ. ಮಾರಮ್ಮನ ಎದುರಲ್ಲಿ ಬೇವಿನಸೊಪ್ಪಿನಿಂದ ಪುಟ್ಟ ಗುಡಿಸಿಲೊಂದು ಹಾಕಿ ಅದರೊಳಗೆ ಬೇವಿನಸೊಪ್ಪಿನಿಂದ ಮಣೆಮಾಡಿ ಅದರ ಮಧ್ಯದಲ್ಲಿ ಘಟವಿಟ್ಟು ಅದರಮೇಲೆ ದೀಪಹಚ್ಚಿ ಅದಕ್ಕೆ ಗ್ರಾಮದ ಜನರೆಲ್ಲ ಪೂಜಿಸುತ್ತಾರೆ. ಕ್ರಮವಾಗಿ ಶಾನುಭೋಗರು ನಂತರ ಗೌಡರು ಆಮೇಲೆ ಉಳಿದವರು ಬಂದು ಘಟೆಗೆ ಆರತಿ ಬೆಳಗಿ, ಪೂಜೆಮಾಡಿಸಿಕೊಂಡು ಹೋಗುತ್ತಾರೆ ಆರತಿ ತಂದವರೆಲ್ಲರೂ ಮೊಸರನ್ನವನ್ನು ತಂದು ಅಲ್ಲಿ ಇಟ್ಟು ಹೋಗುತ್ತಾರೆ. ಆರತಿ ತಂದವರು ನೀಡಿದ ಮೊಸರನ್ನವನ್ನು ಊರಿನ ಘಟ ಪೂಜಾಕಾರ್ಯದಲ್ಲಿ ಭಾಗಿಯಾದ ಮಡಿವಾಳರು, ಎಡದವರು ಮತ್ತು ಬಲದವರು ಹಂಚಿಕೊಳ್ಳುತ್ತಾರೆ. ಇದೇ ರೀತಿ ಹೊಸಹಳ್ಳಿ, ಸೀಗೆಪಾಳ್ಯ, ಚಿಕ್ಕಪಾಲನ ಹಳ್ಳಿಯಲ್ಲಿಯೂ ಘಟಪೂಜೆ ನದೆಯುತ್ತದೆ. ಘಟಪೂಜೆಗೆ ಹೊರಡುವ ಮೊದಲು ಊರಿನ ಮುಖಂಡರ ಸಮ್ಮುಖದಲ್ಲಿ ಅರೆವಾದ್ಯದವರು, ತಮಟೆಯವರು, ಮಡಿವಾಳರು, ತೋಟಿ, ತಳವಾರ, ಮತ್ತು ಇವರಿಗೆ ಸಹಾಯಕರಾಗಿ ಕೆಲವರು ಊರಿನ ಮುಖಂಡರ ಎದುರು ಸೇರಿ ನಾಲ್ಕು ಹಳ್ಳಿಯಲ್ಲಿ ಯಾವ ಹಳ್ಳಿಗೆ ಯಾರು ಯಾರು ಹೂಗಬೇಕೆಂದು ತೀರ್ಮಾನ ಮಾಡಿಕೊಂಡು ಅದರಂತೆ ಆ ಹಳ್ಳಿಗಳಿಗೆ ಹೋಗಿ ಘಟಪೂಜೆ ಮಾಡಿ ಬೆಳಗಿನ ವೇಳೆ ಹಿಂತಿರುಗಿ ಬರುತ್ತಾರೆ. ದೊಡ್ಡಪಾಲನಹಳ್ಳಿಯಲ್ಲಿ ಘಟಕ್ಕೆ ಮತ್ತು ಮಾರಮ್ಮನಿಗೆ ಎರಡಕ್ಕೂ ಪೂಜೆ ಸಲ್ಲಿಸಿದರೆ ಉಳಿದ ಹಳ್ಳಿಗಳಲ್ಲಿ ಘಟಕ್ಕೆ ಮತ್ತು ಕರವುಗಲ್ಲಿಗೆ ಪೂಜೆಸಲ್ಲಿಸುತ್ತಾರೆ. ಉಳಿದ ಹಳ್ಳಿಗಳಲ್ಲಿ ಮಾರಮ್ಮನ ಗುಡಿಯಿಲ್ಲ ಆದ್ದರಿಂದ ಕರವುಗಲ್ಲಿಗೆ ಮಾರಮ್ಮನ ಸ್ಥಾನ ನೀಡಿ ಅದನ್ನು ಕರವುಗಲ್ಲಮ್ಮ ಎಂದು ಪೂಜೆ ಮಾಡುತ್ತಾರೆ.

ಇವಿಷ್ಟು ಆಚರಣೆಗಳು ಮಾರಮ್ಮನ ಸಮ್ಮುಖದಲ್ಲಿ ನಡೆದರೆ ಮುಂದಿನದು ಕುಮಾರರಾಮನ ಜಾತ್ರೆಯ ಆಚರಣೆಗಳು ಸೋಮವಾರದಿಂದ ಬುಧವಾರದ ತನಕ ತುಂಬು ಜಾತ್ರೆಯಾದರೆ ಗುರುವಾರದಿಂದ ಭಾನುವಾರದ ತನಕ ಸರಳವಾಗಿ ಗ್ರಾಮಸ್ಥರಿಂದಲೇ ಜಾತ್ರೆ ವೈಭವದಿಂದ ನಡೆಯುತ್ತವೆ.

ಸೋಮವಾರ ಮಧ್ಯಾಹ್ನದ ನಂತರ ಕುಮಾರರಾಮನ ತಾಯಿ ಹರಿಯಮ್ಮನ ಜಲಧಿಗೆ ಸಕಲ ಸಿದ್ದತೆಗಳನ್ನು ಮಾಡಿಕೊಳ್ಳುತ್ತಾರೆ. ಮಂಗಳವಾರ ಬೆಳಗ್ಗೆ ಸುಮಾರು ಐದು ಗಂಟೆಯ ವೇಳೆಗೆ ಹರಿಯಮ್ಮ ಕುಮಾರರಾಮ ಮತ್ತು ಹುಲಿರಾಮದೇವರ[9] ಸಮೇತ ದೇವಾಲಯದಿಂದ ಸ್ವಲ್ಪದೂರದಲ್ಲಿರುವ ಜಲಧಿಬಾವಿಯ ಬಳಿಗೆ ಅರೆವಾದ್ಯಸಮೇತ ಕರೆದುಕೊಂಡು ಹೋಗಿ ಪುಣ್ಯಾರ್ಚನೆ ಸಹಿತ ಪೂಜೆ ಸಲ್ಲಿಸಿ ದೇವರಿಗೆ ಹೂವಿನಿಂದ ಅಲಂಕಾರ ಮಾಡಿ ಅಲ್ಲಿಂದ ಹೊರಡಲು ಸಿದ್ದರಾಗುತ್ತಾರೆ. ಆ ಸಮಯದಲ್ಲಿ ಹರಕೆ ಹೊತ್ತಿರುವ ಭಕ್ತಾದಿಗಳು ಸಸ್ತ್ರ ಹಾಕಿಸಿಕೊಂಡು ತಮ್ಮ ಭಕ್ತಿಯನ್ನು ಹರಿಯಮ್ಮ ದೇವರಿಗೆ ಸಮರ್ಪಿಸುತ್ತಾರೆ. ಸಸ್ತ್ರ ಹಾಕಿಸಿಕೊಳ್ಳುವ ಭಕ್ತಾದಿಗಳು ಹಿಂದಿನ ದಿನ ರಾತ್ರಿ ಉಪವಾಸವಿದ್ದು ಬೆಳಗ್ಗೆ ಶುಭ್ರರಾಗಿ ಬಂದು ದೇವರ ಸನ್ನಿಧಿಯಲ್ಲಿ ನೀಡಿದ

ಕಬ್ಬಿಣದ ಸರಳನ್ನು ಬಾಯಿಯ ಒಂದು ಭಾಗಕ್ಕೆ ಚುಚ್ಚಿಕೊಂಡು ಹರಿಯಮ್ಮ ರಾಮದೇವರಿಗೆ ಜೈಕಾರ ಹಾಕುತ್ತಾ ತಮ್ಮ ಹರಕೆ ತೀರಿಸುತ್ತಾರೆ. ನಂತರ ಬಾಯಿಗೆ ಚುಚ್ಚಿಕೊಂಡಿದ್ದ ಸರಳನ್ನು ತೆಗೆದು ಆ ಜಾಗಕ್ಕೆ ಭಂಡಾರ ಹಚ್ಚಿಕೊಂಡು ಅಲ್ಲಿಂದ ಹೊರಡುತ್ತಾರೆ. ಹರಿಯಮ್ಮ ದೇವರನ್ನು ಜಲಧಿಬಾವಿಯಿಂದ ದೇವಾಲಯದ ತನಕ ಮಡಿಬಟ್ಟೆಯನ್ನು ಹಾಸಿ ಅದರ ಮೇಲೆ ಹರಿಯಮ್ಮದೇವರನ್ನು ಹೊತ್ತ ವ್ಯಕ್ತಿಯನ್ನು ಮತ್ತು ಕಳಸ ಹೊತ್ತ ವ್ಯಕ್ತಿಯನ್ನು ಇವರ ಹಿಂದೆ ರಾಮಪ್ಪ ಮತ್ತು ಹುಲಿರಾಮಪ್ಪ ದೇವರುಗಳನ್ನು ಚಾಮರ ಬೀಸುತ್ತಾ ಅರೆವಾದ್ಯ ಸಮೇತ ಕರೆತರುತ್ತಾರೆ. ಹರಿಯಮ್ಮ ದೇವರು ಗುಡಿದುಂಬಿದ ಮೇಲೆ ಮತ್ತೆ ಗ್ರಾಮಸ್ಥರು ಹೊರಗಿನಿಂದ ಬಂದ ಭಕ್ತಾದಿಗಳಿಂದ ಆರತಿ ಪೂಜೆ ನಡೆಯುತ್ತದೆ. ಮತ್ತೆ ಹರಿಯಮ್ಮ ದೇವರು ದೇವಾಲಯದಿಂದ ಹೊರಬರುವುದು ಮುಂದಿನ ವರ್ಷ ಜಾತ್ರೆಯ ಜಲಧಿಯ ದಿನದಂದೆ. ಮಧ್ಯಾಹ್ನ ಆರ್ಯವೈಶ್ಯ ಮಂಡಳಿಯವರು ನಿರ್ಮಿಸಿಕೊಂಡಿರುವ ಛತ್ರಕ್ಕೆ ಕುಮಾರ ರಾಮನನ್ನು ರಥದಲ್ಲಿ ಅಥವಾ ಪಲ್ಲಕ್ಕಿಯಲ್ಲಿ ಕೂಡಿಸಿಕೊಂಡು ಕರೆದೊಯ್ದು ಅಲ್ಲಿ ದೇವರಿಗೆ ಪೂಜೆ ಸಲ್ಲಿಸಿ ತಾವು ಮಾಡಿರುವ ಪ್ರಸಾದವನ್ನು ಅಲ್ಲಿ ನೆರೆದಿರುವ ಭಕ್ತಾದಿಗಳಿಗೆ ಹಂಚುತ್ತಾರೆ. ಪೂಜೆ ಪ್ರಸಾದ ವಿನಿಯೋಗ ಆದ ಮೇಲೆ ಮತ್ತೆ ಕುಮಾರರಾಮನನ್ನು ರಥದಲ್ಲಿ ಕರೆತಂದು ದೇವಾಲಯಕ್ಕೆ ಬಿಟ್ಟು ಹೋಗುತ್ತಾರೆ. ಇತ್ತೀಚೆಗೆ ಕೆಲವು ವರ್ಷಗಳಿಂದ ಸರ್ಕಾರದವತಿಯಿಂದ ರಥೋತ್ಸವ ನಡೆಸುವ ಪರಿಪಾಠ ರೂಢಿಯಾಗಿದೆ. ಆರ್ಯವೈಶ್ಯ ಮಂಡಳಿಯವರ ಪೂಜೆಯ ನಂತರ ರಥೋತ್ಸವ ನಡೆಯುತ್ತದೆ. ಬೆಳಗ್ಗೆ ಜಲಧಿಯ ವೇಳೆ ಹರಿಯಮ್ಮದೇವರಿಗೆ ಸಸ್ತ್ರ ಹಾಕಿಸಿಕೊಂಡರೆ ಅದೇ ದಿನ ಸಂಜೆ ರಾಮದೇವರ ಹೆಸರಲ್ಲಿ ಸಸ್ತ್ರ ಹಾಕಿಸಿಕೊಂಡು ತಮ್ಮ ಭಕ್ತಿಯನ್ನು ಸಮರ್ಪಿಸುತ್ತಾರೆ.

ಕುಮಾರರಾಮನ ಜೀವನದಲ್ಲಿ ಚೆಂಡಾಡುವ ಮತ್ತು ಓಕಳಿ ಆಡುವ ಉಲ್ಲೇಖಗಳು ನಮಗೆ ದೊರೆಯುತ್ತದೆ. ಅದರ ದ್ಯೋತಕವಾಗಿ ಈ ಎರಡು ಆಚರಣೆಗಳು ಬುಧವಾರದ ದಿನ ಜಾತ್ರೆ ಪ್ರಯುಕ್ತ ನಡೆಯುತ್ತದೆ. ಪಕ್ಕದ ಗ್ರಾಮಗಳಾದ ಸೀಗೆಪಾಳ್ಯ ಮತ್ತು ಚಿಕ್ಕಪಾಲನಹಳ್ಳಿಯಿಂದ ಗ್ರಾಮಸ್ಥರುಗಳು ಎತ್ತಿನಗಾಡಿಯಲ್ಲಿ ಹೆಸರುಬೇಳೆ ಪಾನಕ ತಯಾರುಮಾಡಿಕೊಂಡು ಬಂದು ದೇವರಿಗೆ ಪೂಜೆ ಸಲ್ಲಿಸಿ ನಂತರ ಅದನ್ನು ಭಕ್ತಾದಿಗಳಿಗೆ ಹಂಚುತ್ತಾರೆ. ಅದರ ವಿನಿಯೋಗವಾದ ಮೇಲೆ ಚೆಂಡಾಟದ ಆಚರಣೆ ಆರಂಭವಾಗುತ್ತದೆ. ದೇವಾಲಯದಲ್ಲಿ ಊರಿನ ಮುಖಂಡರು ಬಂಗಾರದ ಬಣ್ಣದ ಲೋಹದ ಚೆಂಡನ್ನು ಒಂದೆರಡು ಬಾರಿ ಆಕಡೆಯಿಂದ ಈಕಡೆಗೆ ಎಸೆದು ಆಮೇಲೆ ದೇವರ ಮುಂದೆ ಆಕಡೆ ಈಕಡೆ ಎರಡು ಕಲ್ಲೋ ಅಥವಾ ಇಟ್ಟಿಗೆಯೋ ಇಟ್ಟು ಅದರ ಮೇಲೆ ಕಬ್ಬಿಣದ ಸರಳುಗಳನ್ನಿಟ್ಟು ಸ್ವಲ್ಪ ದೂರ ನಿಂತು ಬಟ್ಟೆಯಿಂದ ಕಟ್ಟಿರುವ ಹಳದಿಬಣ್ಣದ ಚೆಂಡಿನಿಂದ ಆ ಸರಳನ್ನು ಕೆಳಕ್ಕೆ ಬೀಳಿಸುವ ಆಟ ನಡೆಯುತ್ತದೆ ಇದಾದ ಮೇಲೆ ದೇವಾಲಯದಿಂದ ಹೊರಕ್ಕೆ ಭಕ್ತಾದಿಗಳಿಗೆ ಚೆಂಡನ್ನು ಎಸೆಯುತ್ತಾರೆ .ಚೆಂಡಿಗಾಗಿ ಕಾಯುತ್ತಿದ್ದ ಭಕ್ತಾದಿಗಳು ಹೋ ಎಂದು ಕೂಗುತ್ತಾ ಎಲ್ಲರೂ ಚೆಂಡಾಟದಲ್ಲಿ ಭಾಗಿಯಾಗುತ್ತಾರೆ. ಚೆಂಡು ಹಿಡಿಯಲು ಮತ್ತು ಎಸೆಯಲು ನಾ ಮುಂದು ತಾ ಮುಂದು ಎಂದು ಮುಗಿಬಿದ್ದು ಖುಷಿಯಿಂದ ಆಡುತ್ತಾರೆ. ಸ್ವಲ್ಪ ಸಮಯದ ನಂತರ ಆ ಚೆಂಡನ್ನು ಮುಖಂಡರು ಮರಳಿ ಪಡೆದು ಮುಂದಿನ ಆಚರಣೆಗೆ ಅನುವುಮಾಡಿಕೊಡುತ್ತಾರೆ. ಕುಮಾರರಾಮನ ದೇವಾಲಯದ ಮುಂದೆ ನಾಲ್ಕುಕಡೆ ಪರದೆ ಕಟ್ಟಿ ಅದರೊಳಗೆ ಕೊಣ ಬರೆದು ಅದರ ಮೇಲೆ ಪಟ್ಟದ ಅರೆಯಿಟ್ಟು ಪೂಜಿಸುತ್ತಾರೆ. ಕೊಣ ಎಂದರೆ ಅರಿಶಿನದ ಕೊಂಬನ್ನು ಕುಟ್ಟಿ ಪುಡಿಮಾಡಿಕೊಂಡು ಅದರಲ್ಲಿ ಹಸೆ ಬರೆದು ಅದರ ಮೇಲೆ ಅಕ್ಷತೆಗಳಿಂದ ಅಲಂಕರಿಸುತ್ತಾರೆ. ಕೊಣ ಬರೆದು ಮುಗಿದ ಮೇಲೆ ದೇಗುಲದ ಒಳಗಿನಿಂದ ಕಳಸ ತಂದು ಕೊಣದ ಮೇಲಿಟ್ಟು ಆನಂತರ ವಾದ್ಯಸಮೇತ ಜಲಧಿಬಾವಿಯ ಬಳಿಗೆ ಹೋಗುತ್ತಾರೆ. ಅಲ್ಲಿಗೆ ಗೊಲ್ಲರಟ್ಟಿಯಿಂದ ಗೊಲ್ಲಸಮುದಾಯದವರೊಬ್ಬರು ಕುರಿಹಾಲನ್ನು ತಂದಿರುತ್ತಾರೆ. ಅವರಿಗೆ ಗೌರವ ಸಮರ್ಪಿಸಿ ಅವರಿಂದ ಕುರಿಹಾಲನ್ನು ಪಡೆದು ಅರೆವಾದ್ಯದ ಸಮೇತ ಅವರನ್ನು ಕೊಣ ಬರೆದ ಜಾಗಕ್ಕೆ ಕರೆತಂದು ಬಣ್ಣದ ನೀರಿಗೆ ಈ ಹಾಲನ್ನು ಮಿಶ್ರಣ ಮಾಡಿ ಓಕಳಿಯನ್ನು ಸಿದ್ದಪಡಿಸಿ ಕೊಣದ ಮೇಲಿಟ್ಟಿರುವ ಪಟ್ಟದ ಅರೆ, ಕಳಸ ಮತ್ತು ಓಕಳಿಗೆ ಪೂಜೆ ಮಾಡುತ್ತಾರೆ. ಪೂಜೆ ಮುಗಿದ ನಂತರ ಕಟ್ಟಿರುವ ಪರದೆ ತೆಗೆಯುತ್ತಾರೆ. ಕಳಸವನ್ನು ತಲೆಮೇಲೆ ಹೊತ್ತ ವ್ಯಕ್ತಿ ಕೊಣದ ಮೇಲೆ ನಿಲ್ಲುತ್ತಾರೆ. ಆ ವ್ಯಕ್ತಿಯ ಪಾದವನ್ನು ಕುರಿ ಹಾಲಿನಿಂದ ಮತ್ತು ಓಕಳಿ ನೀರಿನಿಂದ ತೊಳೆಯುತ್ತಾರೆ ಈ ಆಚರಣೆ ಮುಗಿಯುವುದೆ ತಡ ಕೊಣ ಬರೆಯಲು ಬಳಸಿರುವ ಅಕ್ಕಿಯನ್ನು ಬಾಚಲು ಭಕ್ತಾದಿಗಳು ಮುಗಿ ಬೀಳುತ್ತಾರೆ. ಆ ಅಕ್ಕಿಯನ್ನು ತಿಂದರೆ ಸಂತಾನ ಭಾಗ್ಯ ದೊರೆಯುತ್ತದೆ ಮತ್ತು ರೋಗರುಜಿನಗಳಿದ್ದರೆ ವಾಸಿಯಾಗುತ್ತದೆ ಎಂಬ ನಂಬಿಕೆ ಭಕ್ತ ಸಮೂಹದಲ್ಲಿದೆ.

ಕೆಲವು ಹುಡುಗರು ಆಗಲೆ ಓಕಳಿ ಆಡಲು ಸಿದ್ದರಾಗಿ ಕೈಯಲ್ಲಿ ಚೆಂಬು ಇತರೆ ರೀತಿಯ ಪಾತ್ರೆ ಹಿಡಿದು ನಿಂತಿರುತ್ತಾರೆ. ಈಗಾಗಲೇ ತಯಾ–ರಿಸಿರುವ ಓಕಳಿಯನ್ನು ಹುಡುಗರ ಪಾತ್ರೆಗಳಿಗೆ ಹಾಕಿ ಓಕಳಿ ಆಡಲು ಸಿದ್ದಗೊಳಿಸುತ್ತಾರೆ. ಆನಂತರ ಕಳಸ, ಕುಮಾರರಾಮ, ಹುಲಿರಾಮಪ್ಪ, ಮತ್ತು ಓಕಳಿ ಆಡಲು ಸಿದ್ದವಾಗಿರುವ ಹುಡುಗರು ಅರೆವಾದ್ಯದ ಸಮೇತ ಮಾರಮ್ಮ ಹಾಗೂ ಕುಮಾರರಾಮ ದೇವಾಲಯದ ಸುತ್ತ ಪ್ರದಕ್ಷಿಣೆ ಬಂದು ಓಕಳಿ ಆಡಲು ಹೋ ಎಂದು ಕೂಗುತ್ತಾ ಅಕ್ಕ ಪಕ್ಕ ನಿಂತಿದ್ದವರಿಗೆ ಓಕಳಿ ಎರಚಲು ಮುಂದಾಗುತ್ತಾರೆ. ಅದರಿಂದ ತಪ್ಪಿಸಿಕೊಳ್ಳಲು ಜನ ದಿಕ್ಕಾಪಾಲಾಗಿ ಓಡುತ್ತಾರೆ. ಓಕಳಿ ಆಡುವ ಹುಡುಗರು ಓಡಿದ ಹಾಗೆ ಕುಮಾರರಾಮ ಮತ್ತು ಹುಲಿರಾಮ ದೇವರನ್ನು ಹೊತ್ತು ನಿಂತಿದ್ದವರು ಆ ಹುಡುಗರನ್ನು ಅಟ್ಟಿಸಿಕೊಂಡು ಹೋಗುತ್ತಾರೆ ದೇವಾಲಯದ ಪೂಜಾರರು ಮತ್ತು ಊರಿನ ಪ್ರಮುಖರು ಓಡಿಹೋಗುತ್ತಿರುವ ದೇವರುಗಳನ್ನು ಹಿಡಿದುನಿಲ್ಲಿಸಿ ಮತ್ತೆ ಹಿಂದಕ್ಕೆ ಕರೆದು ತರುತ್ತಾರೆ. ಅಷ್ಟರೊಳಗೆ ಓಕಳಿ ಆಡಿದ ಹುಡುಗರು ತಮ್ಮ ಮನೆಗಳಿಗೆ ಹೋಗಿ ಬೇಗನೆ ಸ್ನಾನ ಮಾಡಿ ಬೇರೆ ಬಟ್ಟೆ ಧರಿಸಿ ಬರುತ್ತಾರೆ.

ಓಕಳಿ ಆಟ ಮುಗಿದ ನಂತರ ದೇವಾಲಯದ ಮುಂದೆ ಎಲ್ಲರು ಸೇರುತ್ತಾರೆ. ಕುಮಾರರಾಮ ಮತ್ತು ಹುಲಿರಾಮದೇವರ ಸಮ್ಮುಖದಲ್ಲಿ ಛತ್ರ, ಚಾಮರ, ಸೂರ್ಯಪಾನ, ಚಾಟಿ, ಅಲಗು, ಪಂಜು ಹೀಗೆ ವಿವಿಧ ರೀತಿಯ ಸೇವೆಯ ಸಮರ್ಪಣೆ ಆಂಜನೇಯನ ಗುಡಿಯ ಎದುರು ನಡೆಯುತ್ತದೆ. ಊರಿನ ಕೆಲವು ವ್ಯಕ್ತಿಗಳು ಚಾಟಿಯಿಂದ ಹೊಡೆದುಕೊಂಡು ಇನ್ನು ಕೆಲವರು ಕತ್ತಿಯಿಂದ ಹೊಟ್ಟೆಗೆ ಹೊಡೆದುಕೊಳ್ಳುವ ಮೂಲಕ ತಮ್ಮ ಭಕ್ತಿಯನ್ನು ಸಮರ್ಪಿಸುತ್ತಾರೆ. ಆ ಭಕ್ತಿಯ ಸಮರ್ಪಣೆಯ ಉದ್ದಕ್ಕೂ ಅರೆವಾದ್ಯವನ್ನು ಬಾರಿಸುತ್ತಲೇ ಇರುತ್ತಾರೆ. ಸೇವೆ ಸಮರ್ಪಣೆಯ ನಂತರ ಎಲ್ಲರೂ ಸುತ್ತುವರೆದು ಕುಮಾರರಾಮನ ಜೀವನದ ತುಣುಕುಗಳನ್ನು ಹಾಡುತ್ತ ಕುಣಿಯುತ್ತ ಹೋ ಎಂದು ಕೂಗುತ್ತಾ ಆ ಆಚರಣೆಯನ್ನು ಮುಗಿಸುತ್ತಾರೆ. ಆನಂತರ ಗೌಡರ ಮನೆಯವರು ಮತ್ತೆ ಈರಮಾಸ್ತಿ ವೇಷ ತೊಟ್ಟು ಅರೆವಾದ್ಯದ ಸಮೇತ ದೇವರಿಗೆ ನಮಸ್ಕರಿಸಿ ಜಲಧಿಬಾವಿಯ ಬಳಿಗೆ ಹೋಗಿ ಈರಮಾಸ್ತಿ ಬಿಡುವುದರ (ವಿಸರ್ಜನೆ) ಮೂಲಕ ತುಂಬು ಜಾತ್ರೆಗೆ ಮುಕ್ತಾಯವಾಡುತ್ತಾರೆ. ಅಂದು ರಾತ್ರಿ ಕುಮಾರ ರಾಮನನ್ನು ಮೊಗ್ಗಿನ ಪಲ್ಲಕ್ಕಿಯಲ್ಲಿ ಕೂಡಿಸಿ ಪೌರಾಣಿಕ ನಾಟಕ ಅಥವಾ ಹರಿಕಥೆ ಇಲ್ಲವೆ ಕೋಲಾಟ ಯಾವುದಾದರೊಂದು ಕಾರ್ಯಕ್ರಮದ ಮೂಲಕ ಇಡೀ ರಾತ್ರಿ ಕಳೆಯುತ್ತಾರೆ.

ಮಾರನೆ ದಿನ ಗುರುವಾರ ಸಂಜೆ ವೇಳೆಗೆ ಬೆಟ್ಟದ ತಪ್ಪಲಲ್ಲಿರುವ ಹುಲಿರಾಮಪ್ಪದೇವರ ಗುಡಿಗೆ ಗ್ರಾಮಸ್ಥರೆಲ್ಲರೂ ತೆರಳಿ ಅಲ್ಲಿ ಪೂಜೆ ಸಲ್ಲಿಸಿ ಪಾನಕ ಹೆಸರುಬೇಳೆ ಪ್ರಸಾದವನ್ನು ಭಕ್ತರಿಗೆ ಹಂಚಿ ಹುಲಿರಾಮಪ್ಪನಿಗೆ ಆರತಿ ಸೇವೆ ಸಲ್ಲಿಸುತ್ತಾರೆ. ಆ ಸಮಯದಲ್ಲಿ ರಾಮದೇವರು ಮತ್ತು ಹುಲಿರಾಮ ದೇವರುಗಳನ್ನು ಪಲ್ಲಕ್ಕಿಯಲ್ಲಿ ಕೂಡಿಸಿ ಅರೆವಾದ್ಯದ ಸಮೇತ ಕರೆದುಕೊಂಡು ಹೋಗಿ ಪೂಜೆ ಮುಗಿದ ನಂತರ ಮರಳಿ ವಾದ್ಯ ಸಮೇತ ಕರೆತರುತ್ತಾರೆ. ಅಲ್ಲಿಗೆ ಹುಲಿರಾಮಪ್ಪನ ಆರತಿ ಸೇವೆ ಮುಕ್ತಾಯವಾಗುತ್ತದೆ.

ಶುಕ್ರವಾರದ ದಿನ ಕುಮಾರರಾಮದೇವರ ಊರಾಡುವ ಆಚರಣೆಯಿರತ್ತದೆ. ಹೊಸಹಳ್ಳಿ, ಸೀಗೆಪಾಳ್ಯ, ಚಿಕ್ಕಪಾಲನ ಹಳ್ಳಿ ಗ್ರಾಮಗಳಿಗೆ ರಾಮದೇವರನ್ನು ಮತ್ತು ಹುಲಿರಾಮದೇವರನ್ನು ಕರೆದೊಯ್ಯುತ್ತಾರೆ. ಆ ಗ್ರಾಮಕ್ಕೆ ಹೋದಾಗ ಆ ಗ್ರಾಮದ ಜನರೆಲ್ಲರೂ ಬಂದು ಹಣ್ಣು ಕಾಯಿ ಪೂಜೆ ಮಾಡಿಸುತ್ತಾರೆ. ಈ ಮೂರು ಗ್ರಾಮಗಳ ಪೂಜೆ ಮುಗಿದ ನಂತರ ಕೊನೆಗೆ ಪಾಲನಹಳ್ಳಿಗೆ ದೇವರು ಹಿಂತಿರುಗಿ ಬರುತ್ತದೆ. ಆಗ ಪಾಲನಹಳ್ಳಿ ಗ್ರಾಮಸ್ಥರು ದೇವರಿಗೆ ಹಣ್ಣು ಕಾಯಿ ಮಾಡಿಸುವ ಮೂಲಕ ದೇವರು ಊರಾಡುವ ಆಚರಣೆಯು ಮುಗಿಯುತ್ತದೆ. ಶನಿವಾರ ಯಾವುದೇ ವಿಶೇಷ ಕಾರ್ಯಕ್ರಮವಿರುವುದಿಲ್ಲ. ಭಾನುವಾರ ಮರುಪೂಜೆ ಸಲ್ಲಿಸಿ, ದೇವಾಲಯದ ಮುಂದೆ ರಾಡಬಾಗಿಲಲ್ಲಿ ನಿಲ್ಲಿಸಿದ್ದ ಧ್ವಜಕಂಭವನ್ನು ಇಳಿಸಿ ಕುಮಾರರಾಮನ ಜಾತ್ರಾ ಮಹೋತ್ಸವಕ್ಕೆ ತೆರೆ ಎಳೆಯುತ್ತಾರೆ.

ಕುಮಾರರಾಮನ ಜಾತ್ರೆ ಮತ್ತು ದೇವಾಲಯದ ಇತರೆ ಕಾರ್ಯಕ್ರಮಗಳಲ್ಲಿ ಊರಿನ ಗೌಡರು, ಶಾನುಭೋಗರು, ಪಣಗಾರರು, ಯಜಮಾನರು, ಅರ್ಚಕರು, ಹಿರೇಕೈವಾಡ, ಕೊಮ್ಮಾರರು, ಗೊಲ್ಲಗೌಡರು, ಮಡಿವಾಳರು, ತಳವಾರರು, ತೋಟಿಯವರು, ಅರೆವಾದ್ಯ, ತಮಟೆವಾದ್ಯ ಮತ್ತು ನಾಲ್ಕು ಹಳ್ಳಿಯ ಗ್ರಾಮದ ಜನರ ಸಹಕಾರ ಮತ್ತು ಸಮನ್ವಯತೆಯಿಂದ ಜಾತ್ರೆ ಮತ್ತು ಇತರೆ ಕಾರ್ಯಕ್ರಮಗಳು ಅಡೆತಡೆಯಿಲ್ಲದೆ ನಡೆಯುತ್ತಿದೆ.

**ಕೊನೆಟಿಪ್ಪಣಿ :**

1. ಪ್ರೊ. ಡಿ. ವಿ. ಪರಮಶಿವಮೂರ್ತಿ, ಲೇಖನ: "ವೀರ ಕಂಪಿಲರಾಯನ ಎರಡನೇ ಶಾಸನ ಪತ್ತೆ", ಪ್ರಜಾಪ್ರಗತಿ ದಿನಪತ್ರಿಕೆ, ತುಮಕೂರು. (ದಿನಾಂಕ 10/04/2022) ತುಮಕೂರು ಎಡಿಷನ್ ( ಪು.3)
2. ಡಾ. ಪಿ. ವಿ. ಕೃಷ್ಣಮೂರ್ತಿ, ಲೇಖನ: ದೊಡ್ಡಪಾಲನಹಳ್ಳಿ ವೀರಗಲ್ಲು ಶಾಸನ ಮತ್ತು ಶಿಲ್ಪ, ಇತಿಹಾಸ ದರ್ಶನ ಸಂಪುಟ, 23/2008, ಕರ್ನಾಟಕ ಇತಿಹಾಸ ಅಕಾಡೆಮಿ ಬೆಂಗಳೂರು. (ಪು.90)
3. ಸತೀಶ್ ಎ. ಎಂ., ಲೇಖನ: ದೊಡ್ಡಪಾಲನಹಳ್ಳಿ ಇತಿಹಾಸ ಮತ್ತು ಐತಿಹ್ಯಗಳ ಅಧ್ಯಯನ, ಸಂಪುಟ 1, ಕನ್ನಡ ಅಂತಾರಾಷ್ಟ್ರೀಯ ಸಂಶೋಧನಾ ಪತ್ರಿಕೆ, 2021. ನೆಹರು ನಗರ, ಬೆಳಗಾವಿ (ಪು.82) .
4. ಹುಲ್ಲೂರು ಶ್ರೀನಿವಾಸ ಜೋಯಿಸರು, ಗಂಡುಗಲಿ ಕುಮಾರರಾಮ, ರಸಿಕ ರಂಜಿನಿ ಪ್ರಕಾಶನ, ಅರಸೀಕೆರೆ. (ಪು.106).
5. ಗುಗ್ಗರಿ: ಉಪ್ಪು ಕಾರ ಇಲ್ಲದೆ ಅವರೆ ಕಾಳನ್ನು ಬೇಯಿಸಿ ಮಾರಮ್ಮನಿಗೆ ನೈವೇದ್ಯ ಮಾಡಿ ಆಮೇಲೆ ಪ್ರಸಾದ ರೂಪದಲ್ಲಿ ಭಕ್ತಾದಿಗಳಿಗೆ ಹಂಚುವುದು.
6. ವಿಕಿಪೀಡಿಯಾ
7. ವಿಕಿಪೀಡಿಯಾ
8. ಡಾ. ಪಿ. ವಿ. ಕೃಷ್ಣಮೂರ್ತಿ, ಲೇಖನ: ದೊಡ್ಡಪಾಲನಹಳ್ಳಿ ವೀರಗಲ್ಲು ಶಾಸನ ಮತ್ತು ಶಿಲ್ಪ, ಇತಿಹಾಸದರ್ಶನ ಸಂಪುಟ, 23/2008, ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು. (ಪು.91).
9. ಹುಲಿರಾಮದೇವರು : ರಾಮಪ್ಪ (ಕುಮಾರರಾಮ) ಹುಲಿರಾಮಪ್ಪ (ಹುಲಿರಾಮದೇವರು) ಪಾಲನಹಳ್ಳಿ ಜೋಡಿ ದೇವರುಗಳು ಎಂದೇ ಪ್ರಸಿದ್ದಿಯಾಗಿದೆ. ಕುಮಾರರಾಮನಂತೆ ಹುಲಿರಾಮದೇವರು ಕೂಡ ದೈವತ್ವಕ್ಕೇರಿದ ವ್ಯಕ್ತಿ. ರಾಮಪ್ಪ ಎಂಬ ವ್ಯಕ್ತಿ ಈ ಊರಲ್ಲಿ ವಾಸಿಸುತ್ತಿದ್ದ. ಊರಿಗೆ ಭೀಕರ ಬರಗಾಲ ಬಂದಾಗ ಊರಿನ ಉಳಿವಿಗಾಗಿ ದೇವರ ಮುಂದೆ ಪ್ರತಿಜ್ಞೆ ಮಾಡಿ ಅದರಂತೆ ಬೆಟ್ಟದಲ್ಲಿರುವ ಕಾದ ಬಂಡೆ ಮೇಲೆ ಮಲಗಿದಾಗ ಹುಲಿ ಬಂದು ನನ್ನನ್ನು ತಿಂದುಹೋಗುತ್ತದೆ. ಹುಲಿ ಬಂದು ನನ್ನನ್ನು ತಿಂದ ಮೇಲೆ ಬರಗಾಲ ಹೋಗಿ ಮಳೆ ಬರುತ್ತದೆ. ದೇವರು ಇರುವುದು ನಿಜವಾದರೆ ನನ್ನ ಮಾತು ನೆರವೇರಲಿ. ನನ್ನ ನಂತರ ಊರಿನವರು ಸುಖವಾಗಿ ಬಾಳಲಿ ಎಂದು ಹೇಳಿ .ಕಾದ ಬಂಡೆಯ ಮೇಲೆ ಮಲಗಿದ ಅವನ ಮಾತಿನಂತೆ ಅವನನ್ನು ಹುಲಿ ಬಂದು ತಿಂದಿತು, ಊರ ಬರಗಾಲವು ಹೋಯಿತು. ಹುಲಿತಿಂದು ಬಿಟ್ಟ ರಾಮಪ್ಪನ ದೇಹವನ್ನು ಊರಿನ ಜನ ತಂದು ಬೆಟ್ಟದ ತಪ್ಪಲಲ್ಲಿ ಇಟ್ಟು ಪ್ರತಿಯೊಬ್ಬರು ಒಂದೊಂದು ಕಲ್ಲು ಹಾಕುತ್ತಾ ಹೋದರು ಅದು ಕಲ್ಲಿನ ರಾಶಿಯ ಸಮಾಧಿಯಾಯಿತು.ಅದರ ಮುಂದೆ ಗುಡಿ ಕಟ್ಟಿ ಕಾಲಕ್ರಮೇಣ ರಾಮಪ್ಪನನ್ನು ಪೂಜಿಸಲು ಆರಂಭಿಸಿದರು. ಹುಲಿತಿಂದರಾಮಪ್ಪ ಕ್ರಮೇಣ ಹುಲಿರಾಮಪ್ಪನಾಗಿ ಇಂದು ಭಕ್ತಾದಿಗಳಿಂದ ಪೂಜಿಸಲ್ಪಡುತ್ತಿದ್ದಾನೆ. ಬೆಟ್ಟದ ತಪ್ಪಲಲ್ಲಿ ಕಲ್ಲಿನ ರಾಶಿ ಸಮಾಧಿ ಈಗಲೂ ಇದೆ. ಅದರ ಮುಂದಿನ ಗುಡಿಯನ್ನು ಇತ್ತೀಚೆಗೆ ಹೊಸದಾಗಿ ಕಟ್ಟಿಸಿದ್ದಾರೆ. ಊರೊಳಗೆ ಕುಮಾರರಾಮನ ದೇವಾಲಯದ ಬಲಭಾಗದಲ್ಲಿ ಪುಟ್ಟಗುಡಿಕಟ್ಟಿ ಉತ್ಸವಮೂರ್ತಿಯಿಟ್ಟು ಪೂಜಿಸುತ್ತಿದ್ದಾರೆ. (ವಕ್ತೃ-ರಾಮಚಂದ್ರಪ್ಪ ಅರ್ಚಕರು ಕುಮಾರರಾಮ ದೇವಾಲಯ)

**ಪರಾಮರ್ಶನ ಆಕರಗಳು.**


1. ಡಾ. ಪಿ. ವಿ. ಕೃಷ್ಣಮೂರ್ತಿ, ಲೇ. ದೊಡ್ಡಪಾಲನಹಳ್ಳಿ ವೀರಗಲ್ಲು ಶಾಸನ ಮತ್ತು ಶಿಲ್ಪ, ಇತಿಹಾಸ ದರ್ಶನ ಸಂಪುಟ, 23/2008, ಕರ್ನಾಟಕ ಇತಿಹಾಸ ಅಕಾಡೆಮಿ.
2. ಡಿ. ವಿ. ಪರಮಶಿವಮೂರ್ತಿ, ಲೇ. ವೀರ ಕಂಪಿಲರಾಯನ ಎರಡನೇ ಶಾಸನ ಪತ್ತೆ ದಿನಾಂಕ 10/04/2022, ಪ್ರಜಾಪ್ರಗತಿ ದಿನಪತ್ರಿಕೆ, ತುಮಕೂರು.
3. ಸತೀಶ್ ಎ. ಎಂ., ದೊಡ್ಡಪಾಲನಹಳ್ಳಿ ಇತಿಹಾಸ ಮತ್ತು ಐತಿಹ್ಯಗಳ ಅಧ್ಯಯನ, ಸಂಪುಟ 1, ಕನ್ನಡ ಅಂತಾರಾಷ್ಟ್ರೀಯ ಸಂಶೋಧನಾ ಪತ್ರಿಕೆ, 2021.
4. ವಿಕಿಪೀಡಿಯಾ (ಹೊನ್ನಾರ ಮತ್ತು ಜಾಗಾರದ ಮಾಹಿತಿ ಸಂಗ್ರಹ)
5. ಹುಲ್ಲೂರು ಶ್ರೀನಿವಾಸ ಜೋಯಿಸರು, ಗಂಡುಗಲಿ ಕುಮಾರರಾಮ, ರಸಿಕ ರಂಜಿನಿ ಪ್ರಕಾಶನ, ಅರಸೀಕೆರೆ.